# ಆಯುಕ್ತರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ ರೊದ್ದ ರಸ್ತೆ, ಧಾರವಾಡ-580 008

ಸಂಖ್ಯೆ:ಸಿ2/ಸಿಆ/ಅಧೀಕ್ಷಕರು/ಜೇ.ಪ.ಪ್ರ/82/2017-18 ದಿನಾಂಕ:13-04-2018.

## ಜ್ಞಾಪನ

ವಿಷಯ :: ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ:2368/2011 ಪ್ರಕರಣದಲ್ಲಿ ದಿನಾಂಕ:09/02/2017ರಂದು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕೇತರ ವೃಂದದ ನೌಕರರಿಗೆ ಮುಂಬಡ್ತಿ ಹಾಗೂ ಹಿಂಬಡ್ತಿ ಸಂಬಂಧ್ಧ ಕೌನ್ಸಲಿಂಗ್‌ಗೆ ಹಾಜರಾಗುವ ಕುರಿತು.

ಉಲ್ಲೇಖ :: ಸರ್ಕಾರದ ಅ.ಸ.ಪ.ಸಂಖ್ಯೆ:ಇಡಿ 55 ಡಿ.ಎ.ಆರ್ 2018. ದಿನಾಂಕ:05/04/2018.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದನ್ವಯ ಮಾನ್ಯ ಸಿವಿಲ್ ಅಪೀಲು ಸಂಖ್ಯೆ:2368/2011 ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:09/02/2017 ರಂದು ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವ ಸಂಬಂಧ ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವಿಧ ಬೋಧಕೇತರ ವೃಂದದ ಜೇಷ್ಠತಾ ಪಟ್ಟಿಗಳನ್ನು ಪರಿಷ್ಕರಿಸಿ ಪ್ರಕಟಿಸಲಾಗಿದೆ.

ಸದರಿ ಜೇಷ್ಠತಾ ಪಟ್ಟಿಗಳನ್ವಯ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ದಿನಾಂಕ:04-04-2018ರ ಸುತ್ತೋಲೆಯಲ್ಲಿ ಸೂಚಿಸಿರುವಂತೆ ತತ್ಪರಿಣಾಮವಾಗಿ ಕ್ರಮ ಕೈಗೊಳ್ಳಬೇಕಾಗಿರುವುದು ಅಗತ್ಯವಾಗಿದ್ದು, ಈ ಪತ್ರದೊಂದಿಗೆ ಲಗತ್ತಿಸಿದ **ಅನುಬಂಧಗಳಲ್ಲಿರುವ** ಸಿಬ್ಬಂದಿಗಳಿಗೆ ಮುಂಬಡ್ತಿ ಹಾಗೂ ಹಿಂಬಡ್ತಿ ನೀಡುವ ಸಂಬಂಧ ದಿನಾಂಕ: 16-04-2018 ರಂದು ಮಧ್ಯಾಹ್ನ 3=00 ಗಂಟೆಗೆ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇಲ್ಲಿ ಕೌನ್ಸಲಿಂಗ್ ಜರುಗಿಸಲಾಗುವುದು. ಸದರಿ ದಿನಾಂಕದಂದು ಸಂಬಂಧಪಟ್ಟ ಸಿಬ್ಬಂದಿಯವರು ಈ ಕೆಳಕಂಡ ದಾಖಲೆಗಳನ್ನು ಕೌನ್ಸಲಿಂಗ್‌ಗೆ ಬರುವಾಗ ಕಡ್ಡಾಯವಾಗಿ ತರಲು ಸೂಚಿಸಿದೆ.

1. ವಾರ್ಷಿಕ ಕಾರ್ಯನಿರ್ವಹಣಾ ವರದಿಗಳು ಅಥವಾ ವಿಶೇಷ ವರದಿ ದಿನಾಂಕ: 12-04-2018 ಕ್ಕೆ ಇದ್ದಂತೆ. (ಸಂಬಂಧಪಟ್ಟ ಕಛೇರಿಯ ಮುಖ್ಯಸ್ಥರ ಹಾಗೂ ಉಪನಿರ್ದೇಶಕರ ದೃಢೀಕರಣದೊಂದಿಗೆ)
2. ಇಲಾಖಾ ವಿಚಾರಣೆ/ನ್ಯಾಯಾಂಗ ವಿಚಾರಣೆ ಇಲ್ಲದಿರುವ ಬಗ್ಗೆ ದೃಢೀಕರಣ ಪತ್ರ.
3. ಇಲಾಖಾ ಪರೀಕ್ಷೆ ಪಾಸಾದ ಬಗ್ಗೆ ದೃಢೀಕರಣ ಪತ್ರ.

ಅಪರ ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ,
ಧಾರವಾಡ.

ಗೆ,

01) ಸಂಬಂಧಿಸಿದ ಸಿಬ್ಬಂದಿಗೆ

02) ವಿಭಾಗದ ಎಲ್ಲಾ ಉಪನಿರ್ದೇಶಕರು [ಆಡಳಿತ], ಸಾರ್ವಜನಿಕ ಶಿಕ್ಷಣ ಇಲಾಖೆ,